2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ವಿ.ಎಲ್. ಪಾಟೀಲ್.— ಲಿಖಿತ ಮೂಲಕ ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವಿಷಯ : ಪ್ರವಾಸೋದ್ಯಮ ವಿಸ್ತರಣೆಯಲ್ಲಿ ಪ್ರವಾಸಧಾಮಗಳಿಗಾಗಿ 83-84ರಲ್ಲಿ ಖರ್ಚು

ಪ್ರಶ್ನೆ : 216(654) ಡಾ. ವಿ.ಎಸ್. ಆಚಾರ್ಯ (ಉಡುಪಿ).— ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಈ ವರ್ಷ ಅಂದರೆ 1983-84ರಲ್ಲಿ ರಾಜ್ಯದಲ್ಲಿ ಪ್ರವಾಸ ಧಾಮಗಳ ರಚನೆಗಾಗಿ ಈವರೆಗೆ ಆಗಿರುವ ಖರ್ಚು ಎಷ್ಟು ;

ಆ) ಇದರಲ್ಲಿ ಹೊಸ ಧಾಮಗಳಿಗಾಗಿ ಆದ ಖರ್ಚು ಎಷ್ಟು ;

ಇ) ಹಳೆಯ ಯೋಜನೆಗಳು ಸಂಪೂರ್ಣಗೊಂಡಿರುವವೇ ಹಾಗೂ ಈ ಬಗ್ಗೆ ಆದ ವೆಚ್ಚ ಎಷ್ಟು ;

ಈ) ಮಲ್ಪೆ ಕಿನಾಲೆ ಪ್ರವಾಸ ಧಾಮ ಮುಕ್ತಾಯ ಹಂತದಲ್ಲಿದ್ದರೂ ಈ ಬಗ್ಗೆ ಹಣ ಬಿಡುಗಡೆ ಮಾಡದೇ ಯೋಜನೆ ಸ್ಥಗಿತಗೊಂಡಿರಲು ಕಾರಣವೇನು ?

ಉತ್ತರ : ಎಂ. ರಘುಪತಿ (ವಾರ್ತಾ ಪ್ರಚಾರ ಮತ್ತು ಪ್ರವಾಸೋದ್ಯಮ ಮಂತ್ರಿಗಳು).—

ಅ) 1983-84ನೇ ವರ್ಷದಲ್ಲಿ ಒಟ್ಟು 3.90 ಲಕ್ಷ ರೂಪಾಯಿಗಳು ಪ್ರವಾಸ ಧಾಮ ಕಟ್ಟುವ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಖರ್ಚು ಮಾಡಿರುತ್ತಾರೆ.

ಆ) ಇಲ್ಲ.

ಇ) ಎರಡು (2) ಪ್ರವಾಸ ಧಾಮಗಳು ಹಾಗೂ ಒಂದು (1) ಉಪಹಾರ ಗೃಹ ಪೂರ್ಣಗೊಂಡಿದ್ದು ಅವುಗಳ ಒಟ್ಟು ವೆಚ್ಚ 21.25 ಲಕ್ಷ ರೂಪಾಯಿಗಳಾಗಿರುತ್ತವೆ.

ಈ) ಸದರೀ ಯೋಜನೆಗೆ ಕೇಂದ್ರ ಸರ್ಕಾರದಿಂದ ಪಶ್ಚಿಮ ಕರಾವಳಿ ಅಭಿವೃದ್ಧಿ ಯೋಜನೆಯಲ್ಲಿ ಹಣವನ್ನು ಮಂಜೂರು ಮಾಡಲಾಗಿತ್ತು. ಈ ಹಣವನ್ನು ಮಲ್ಪೆ ಕಿನಾಲೆ ಪ್ರವಾಸಧಾಮ ಕ್ಕಾಗಿ ಉಪಯೋಗಿಸಿತ್ತು. ಕೇಂದ್ರ ಸರ್ಕಾರದವರು ಹಣವನ್ನು ನಿಲ್ಲಿಸಿರುವ ಪ್ರಯುಕ್ತ ಯೋಜನೆ ಸ್ಥಗಿತಗೊಂಡಿದೆ.

ವಿಷಯ : ದಾವಣಗೆರೆಯ ಸುತ್ತಮುತ್ತಲೂ ಗ್ರಾಮಾಂತರ ಪ್ರದೇಶಗಳಿಗೆ ಬಸ್ ಸೌಕರ್ಯ ಒದಗಿಸುವುದು.

ಪ್ರಶ್ನೆ : 217 (674) ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಾವಣಗೆರೆಯ ಸುತ್ತಮುತ್ತಲೂ 15 ಕಿ.ಮೀ ಸುತ್ತಳತೆಯಲ್ಲಿ ಇರುವ ಗ್ರಾಮಾಂತರ ಪ್ರದೇಶಗಳಿಗೆ ದಾವಣಗೆರೆಯಿಂದ ಬಸ್ ಸೌಲಭ್ಯ ಕಲ್ಪಿಸುವುದಕ್ಕಾಗಿ ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸಲು ಸರಕಾರದವರು ಉದ್ದೇಶಿಸಿರುವರೆ ;

ಆ) ಈ ಬಗ್ಗೆ ಸರಕಾರಕ್ಕೆ ಮನವಿಗಳೇನಾದರೂ ಬಂದಿವೆಯೇ ;

ಇ) ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ಆದನ್ನು ಕಾರ್ಯಗತ ಮಾಡಲಾಗುವುದು ?

ಉತ್ತರ : ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು).— ಅ) ಹೌದು.

ಆ) ಬಂದಿವೆ.

ಇ) ದಾವಣಗೆರೆ ಸುತ್ತಮುತ್ತಲಿನ 13 ಹಳ್ಳಿಗಳಿಗೆ ಸಾರಿಗೆ ಸೌಲಭ್ಯ ಒದಗಿಸುವುದಕ್ಕೋಸ್ಕರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈಗಾಗಲೇ ದಿನಾಂಕ 1-1-84 ರಿಂದ 8 ಹಳ್ಳಿಗಳಿಂದ ದಾವಣಗೆರೆಗೆ ಬಸ್ಸುಗಳ ಸಂಚಾರವನ್ನು ಪ್ರಾರಂಭಿಸಿದೆ; ದಾವಣಗೆರೆಯಲ್ಲಿರುವ ಬಸ್ ಡಿಪೋಗೆ ಇನ್ನೂ ಹೆಚ್ಚಿನ ವಾಹನಗಳನ್ನು ಒದಗಿಸಿದ ನಂತರ ಇನ್ನುಳಿದ ಮಾರ್ಗಗಳಲ್ಲಿ ಸಾರಿಗೆ ವ್ಯವಸ್ಥೆ ಮಾಡಲಾಗುತ್ತದೆ.

ವಿಷಯ : ದಾವಣಗೆರೆಯಲ್ಲಿರುವ ಎಲ್ಲಾ ನ್ಯಾಯಾಲಯಗಳನ್ನೂ ಸಾರ್ವಜನಿಕರ ಹಿತದೃಷ್ಟಿಯಿಂದ ಒಂದೇ ಕಟ್ಟಡದಲ್ಲಿ ನಡೆಯುವಂತೆ ವ್ಯವಸ್ಥೆ ಮಾಡುವುದು.

ಪ್ರಶ್ನೆ : 219 (673) ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—